ಸಿಸಿ ನಂಃ **76/2022**
ಪಿ <u>ಡಬ್ಲ್ಯೂಃ **1**</u>

ದಿನಾಂಕಃ 21-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಎಂ.ಪಿ ವಕೀಲರಿಂದಃ</u>

6. ಆರೋಪಿ ನಿಮಗೆ ನೀಡಿದ್ದರು ಎಂದು ಹೇಳಲಾದ ಎರಡು ಚೆಕ್ಕುಗಳ ನಂಬರು ಏನು ಎಂದರೆ ಸಾಕ್ಷಿಯು ನನಗೆ ಚೆಕ್ಕಿನ ನಂಬರು ನೆನಪಿಲ್ಲ ಎಂದು ನುಡಿಯುತ್ತಾರೆ. ನನಗೆ ನಿಪಿ-1ರ ಚೆಕ್ಕಿನ ನಂಬರು ಸಹ ನೆನಪಿಲ್ಲ. ನಾನು ಆರೋಪಿಯ ಇನ್ನೊಂದು ಚೆಕ್ಕನ್ನು ನಗದೀಕರಣಕ್ಕಾಗಿ ಹಾಜರು ಮಾಡಿಲ್ಲ. ನಾನು ಯಾದಗಿರಿಯ ಶ್ರೀ ನಾಗರೆಡ್ಡಿ ಶಿವರಾಯ ವಕೀಲರ ಮೂಲಕ ಆರೋಪಿಗೆ ತಿಳುವಳಿಕೆ ಪತ್ರ ಕಳುಹಿಸಿದ್ದೆನು. ನಾನು ನೀಡಿದ ಮಾಹಿತಿ ಪ್ರಕಾರ ಸದರಿ ವಕೀಲರು ಆರೋಪಿಗೆ ನೋಟಿಸ್ ಕಳುಹಿಸಿದ್ದರು. ನೋಟಿಸಿನಲ್ಲಿನ ಅಂಶಗಳನ್ನು ನಾನು ಆಗ ಓದಿ ತಿಳಿದುಕೊಂಡಿದ್ದೆನು. ಎರಡು ಚೆಕ್ಕುಗಳನ್ನು ನಗದೀಕರಣಕ್ಕಾಗಿ ಹಾಜರು ಮಾಡಿದ್ದೆನು ಎಂಬುದಾಗಿ ಸದರಿ ನೋಟಿಸಿನಲ್ಲಿ ನಮೂದಿಸಲಾಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ಆದರೆ ನಾನು ಒಂದು ಚೆಕ್ಕನುನ ಮಾತ್ರ ಹಾಜರು ಮಾಡಿದ್ದೆನು ಎಂದು ನುಡಿಯುತ್ತಾರೆ.

7. ಆರೋಪಿ ನೀಲಿ ಬಣ್ಣದ ಶಾಹಿಯ ಪೆನ್ನಿನಿಂದ ಚೆಕ್ ಹಾಗೂ ಚಾಪಾ ಕಾಗದದಲ್ಲಿ ಸಹಿ ಮಾಡಿದ್ದರು. ಆರೋಪಿ ಸದರಿ ಚೆಕ್ ಹಾಗೂ ಚಾಪಾ ಕಾಗದದಲ್ಲಿ ಪೆನ್ನುಗಳಿಂದ ಸಹಿ ಮಾಡಿರುತ್ತಾರೆ. ಆರೋಪಿ ನನಗೆ ದಿನಾಂಕ ಹಾಗೂ ಮೊತ್ತ ನಮೂದಿಸದ ಖಾಲಿ ಚೆಕ್ಕನ್ನು ಕೊಟ್ಟಿದ್ದರು. ಚೆಕ್ಕಿನಲ್ಲಿನ ಮೊತ್ತವನ್ನು ನಾನೇ ಬರೆದಿರುತ್ತೇನೆ. ದಿನಾಂಕ 31.01.2025 ರಂದು ಈ ಪ್ರಕರಣದ ವಿಚಾರಣೆ ಇತ್ತು ಹಾಗೂ ಸದರಿ ದಿನದಂದು ನಾನು ಯಾದಗಿರಿಯಲ್ಲಿ ಇರಲಿಲ್ಲ ಎಂದರೆ ಸರಿ. ಸದರಿ ದಿನದಂದು ಆರೋಪಿಯ ತಮ್ಮ ಶರಣಗೌಡ ಹತ್ತಿಕುಣಿ ರವರು ನನಗೆ ಮೊಬೈಲ್ ಕರೆ ಮಾಡಿದ್ದರು ಎಂದರೆ ಸರಿಯಲ್ಲ. ಆಗ ನೀವು ಸೊಲ್ಲಾಪೂರದಲ್ಲಿ ಇರುವುದಾಗಿ ತಿಳಿಸಿರುತ್ತೀರಿ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ಮೊಬೈಲ್ ನಂ.9611291888 ಆಗಿರುತ್ತದೆ ಎಂದರೆ ಸರಿ. 9611437777 ನಂಬರು ಆರೋಪಿಯ ತಮ್ಮ ಶರಣಗೌಡ ರವರ ಮೊಬೈಲ್ ನಂಬರು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಶರಣಗೌಡ ರವರು ನಿಮಗೆ ಸದರಿ ದಿನದಂದು ಕರೆ ಮಾಡಿ ಸಿದ್ದಲಿಂಗರೆಡ್ಡಿ ತಂದೆ ತಿಪ್ಪಾರೆಡ್ಡಿ ಪೋಲಿಸ್ ಪಾಟೀಲ್ ರವರನ್ನು ಯಾದಗಿರಿ ನಗರ ಪೋ.ಠಾಣೆಗೆ ಕರೆದುಕೊಂಡು ಬಂದಿದ್ದು ನಿಮಗೆ ಠಾಣೆಗೆ ಬರುವಂತೆ ತಿಳಿಸಿದ್ದರು ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನದಂದು ಸಿದ್ದಲಿಂಗರೆಡ್ಡಿ ಸಹ ನನ್ನೊಂದಿಗೆ ಮೊಬೈಲ್ ಕರೆ ಮೂಲಕ ಮಾತನಾಡಿದ್ದರು ಎಂದರೆ

ಸರಿಯಲ್ಲ. ಆಗ ಸಿದ್ದಲಿಂಗರೆಡ್ಡಿ ರವರು ಆರೋಪಿಯ ಚೆಕ್ಕನ್ನು ನನಗೆ ನೀಡಿ ನನ್ನಿಂದ ಸಾಲ ಪಡೆದುಕೊಂಡಿದ್ದು, ಸದರಿ ಸಾಲವನ್ನು ಯುಗಾದಿ ಒಳಗಾಗಿ ಮರುಪಾವತಿ ಮಾಡುವುದಾಗಿ ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಯುಗಾದಿ ಒಳಗೆ ಈ ಪ್ರಕರಣ ಇತ್ಯಾರ್ಥವಾಗುವುದಿಲ್ಲ ಹಾಗಾಗಿ ನೀವು ಹಣ ನೀಡಿದರೆ ನಾನು ಆಗ ಪ್ರಕರಣವನ್ನು ಹಿಂದೆ ಪಡೆದುಕೊಳ್ಳುತ್ತೇನೆ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

8. ಆರೋಪಿಗೆ ನೋಟಿಸ್ ಯಾವ ದಿನಾಂಕದಂದು ಜಾರಿಯಾಗಿತ್ತು ಎಂದು ನನಗೆ ಗೊತ್ತಿಲ್ಲ. ಆರೋಪಿ ಸದರಿ ನೋಟಿಸಿಗೆ ಉತ್ತರ ನೀಡಿದ್ದರು ಎಂದರೆ ಸರಿ. ಸದರಿ ಉತ್ತರ ನೋಟಿಸ್ ಪತ್ರದಲ್ಲಿನ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ದಿನಾಂಕ 18.11.2021 ರಂದು ನಾನು ಚೆಕ್ಕನ್ನು ಹಾಜರು ಪಡಿಸುವ ಪೂರ್ವದಲ್ಲಿಯೇ ಆರೋಪಿ ಖಾತೆಯನ್ನು ಮುಚ್ಚಿಸಿಕೊಂಡಿದ್ದರು ಎಂಬುದಾಗಿ ಸದರಿ ಉತ್ತರ ಪತ್ರದಲ್ಲಿ ತಿಳಿಸಿರುತ್ತಾರೆ ಎಂದರೆ ಸರಿ. ನೀವು ಸಿದ್ದಲಿಂಗರೆಡ್ಡಿ ರವರೊಂದಿಗೆ ಒಳ್ಳೆಯ ಒಡನಾಟ ಹೊಂದಿರುತ್ತೀರಿ ಎಂರದೆ ಸಾಕ್ಷಿಯು ಪರಿಚಯ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಮತ್ತು ಸದರಿಯವರ ನಡುವೆ ಹಲವಾರು ವ್ಯವಹಾರಗಳು ಇದ್ದವು ಎಂದರೆ ಸರಿಯಲ್ಲ. ಸದರಿ ಸಿದ್ದಲಿಂಗರೆಡ್ಡಿ ರವರು ಸುಮಾರು 5-6 ಕೋಟಿ ಸಾಲ ಮಾಡಿ ಊರು ಬಿಟ್ಟು ಓಡಿ ಹೋಗಿರುತ್ತಾರೆ ಎಂದರೆ ಸರಿ. ಆತನ ವಿರುದ್ಧ ನಗರ ಪೊಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಹಾಗೂ ಚೆಕ್ ಪ್ರಕರಣಗಳೂ ಸಹ ಇದ್ದಾವೆ ಎಂದರೆ ನನಗೆ ಗೊತ್ತಿಲ್ಲ. ಚೆಕ್ ಹಾಜರು ಪಡಿಸುವ ಸುಮಾರು 10 ತಿಂಗಳ ಹಿಂದೆಯೇ ಸಿದ್ದಲಿಂಗರೆಡ್ಡಿ ಊರು ಬಿಟ್ಟು ಹೋಗಿದ್ದರಿಂದ ನಾನು ಆರೋಪಿಯ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆಂದರೆ ಸರಿಯಲ್ಲ. ಆತ ಓಡಿ ಹೋಗಿರುವುದರಿಂದ ನನ್ನ ಹಣ ಮರಳಿ ಬರುವುದಿಲ್ಲ ಎಂಬ ಉದ್ದೇಶದಿಂದ ನಾನು ಆತ ನನಗೆ ನೀಡಿದ್ದ ಆರೋಪಿಯ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಈ ಪ್ರಕರಣ ದಾಖಲಿಸಿದ್ದೇನೆಂದರೆ ಸರಿಯಲ್ಲ.

9. ನನಗೆ ಆರೋಪಿಯ ಕುಟುಂಬದ ಬಗ್ಗೆ ಮಾಹಿತಿ ಇಲ್ಲ. ಆರೊಪಿಯ ಆರ್ಥಿಕ ಪರಿಸ್ಥಿತಿ ಚೆನ್ನಾಗಿರುತ್ತದೆ. ಆರೋಪಿಗೆ ಯಾವತ್ತು ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ವೈನ್ ಶಾಪಿನಲ್ಲಿ ಮ್ಯಾನೇಜರ್ ಆಗಿರುವುದರಿಂದ ಸಾಕಷ್ಟು ಆದಾಯ ಹೊಂದಿರುತ್ತಾನೆ ಹಾಗೂ ಆತ ವ್ಯಾಪಾರ ಮತ್ತು ಒಳ್ಳೆಯ ಕುಟುಂಬ ಸಹ ಹೊಂದಿರುವುದರಿಂದ ಅತನಿಗೆ ಸಾಲ ಪಡೆದುಕೊಳ್ಳುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-6 ರ ಕರಾರು ಪತ್ರದಲ್ಲಿ ಅದನ್ನು ತಯಾರಿಸಿದ ಸ್ಥಳ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಯಾದಗಿರಿ ನ್ಯಾಯಾಲಯದ ಆವರಣದಲ್ಲಿ ಬೆರಳಚ್ಚುಗಾರರ ಕಡೆಯಿಂದ ತಯಾರಿಸಿದ್ದೆವು ಎಂದು ನುಡಿಯುತ್ತಾರೆ. ನನಗೆ

ಸಿದ್ದಲಿಂಗರೆಡ್ಡಿ ರವರ ಕಡೆಯಿಂದ ಬರಬೇಕಾದ ಹಣದ ವಸೂಲಾತಿಗಾಗಿ ಆರೋಪಿ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-6 ರ ಕರಾರು ಪತ್ರವನ್ನು ನಾನು ಸುಳ್ಳು ಸೃಷ್ಟಿ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ. ಆರೋಪಿ ನನ್ನಿಂದ ಯಾವುದೇ ಸಾಲ ಪಡೆದುಕೊಳ್ಳದಿದ್ದರೂ ಸುಳ್ಳು ಪ್ರಕರಣ ದಾಖಲಿಸಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ**.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ